# ನಡಾವಳಿ ಮತ್ತು ನೈತಿಕತೆ ನೀತಿ

## ಅವಿಶ್ವಾಸ & ಪ್ರತಿಸ್ಪರ್ಧೆ ನೀತಿ

ETHICS & LEGAL COMPLIANCE | ISSUED: June 1, 2014 – REVISED: June 16, 2021

ಮ್ಯಾಗ್ನ ತೀವ್ರವಾಗಿ, ಆದರೆ ನ್ಯಾಯವಾಗಿ ಸ್ಪರ್ಧಿಸುತ್ತದೆ ಹಾಗೂ ಮುಕ್ತ ಮತ್ತು ನ್ಯಾಯೋಚಿತ ಸ್ಪರ್ಧೆಯನ್ನು ಬೆಂಬಲಿಸುತ್ತದೆ. ನಾವು ಕಾರ್ಯನಿರ್ವಹಿಸುವ ನ್ಯಾಯವ್ಯಾಪ್ತಿಯಲ್ಲಿ ಅನ್ವಯವಾಗುವ ಎಲ್ಲಾ ಅವಿಶ್ವಾಸ ಕಾನೂನುಗಳನ್ನು ಅನುಸರಿಸುತ್ತೇವೆ. ಈ ನೀತಿ ಮ್ಯಾಗ್ನ ಇಂಟರ್‌ನ್ಯಾಶನಲ್ ಇಂಕ್. ಮತ್ತು ಅದರ ಎಲ್ಲಾ ಕಾರ್ಯಾಚರಣ ಗುಂಪು, ವಿಭಾಗ, ಜಂಟಿ ಉದ್ಯಮಗಳು ಮತ್ತು ಇತರ ಜಾಗತಿಕ ಕಾರ್ಯಾಚರಣೆಗಳಿಗೆ ಅನ್ವಯವಾಗುತ್ತದೆ (ಒಟ್ಟಾರೆಯಾಗಿ " ಮ್ಯಾಗ್ನಗೆ"). ಈ ನೀತಿ ಉದ್ಯೋಗಿ, ಅಧಿಕಾರಿ, ನಿರ್ದೇಶಕ, ಸಲಹೆಗಾರ ಮತ್ತು ಏಜೆಂಟರು ಸೇರಿದಂತೆ ಮ್ಯಾಗ್ನ ಪರವಾಗಿ ಕಾರ್ಯನಿರ್ವಹಿಸುವ ಎಲ್ಲ ವ್ಯಕ್ತಿಗಳಿಗೂ ಅನ್ವಯವಾಗುತ್ತದೆ.

### ಅವಿಶ್ವಾಸ ಕಾನೂನುಗಳು

ಅವಿಶ್ವಾಸ (ಕೆಲವೊಮ್ಮೆ "ಪ್ರತಿಸ್ಪರ್ಧೆ" ಎಂದು ಕರೆಯಲಾಗುವ) ಕಾನೂನುಗಳನ್ನು ಪ್ರತಿಸ್ಪರ್ಧಿಗಳ ನಡುವಿನ ಔಪಚಾರಿಕ ಮತ್ತು ಅನೌಪಚಾರಿಕ ಒಪ್ಪಂದಗಳನ್ನು ನಿಷೇಧಿಸಲು, ಬೆಲೆ ನಿಗದಿ ಮತ್ತು ಮಾರುಕಟ್ಟೆಯ ಅಧಿಕಾರ ಅಥವಾ ಪ್ರಾಬಲ್ಯದ ಸ್ಥಾನವನ್ನು ದುರುಪಯೋಗಪಡಿಸಿಕೊಳ್ಳಲು ಹೆಣೆಯಲಾದ ಕೆಲಸಗಳಂತಹ ವ್ಯಾಪಾರವನ್ನು ಅಸಮಂಜಸವಾಗಿ ನಿರ್ಬಂಧಿಸುವ ಅಭ್ಯಾಸಗಳನ್ನು ನಿಷೇಧಿಸಲು, ವ್ಯಾಪಾರದಲ್ಲಿ ಪ್ರತಿಸ್ಪರ್ಧೆಯನ್ನು ಕಾಪಾಡಿಕೊಳ್ಳಲು ಮತ್ತು ಉತ್ತೇಜಿಸಲು ವಿನ್ಯಾಸಗೊಳಿಸಲಾಗಿದೆ. ಈ ಕಾನೂನುಗಳ ಯಾವುದೇ ಉಲ್ಲಂಘನೆ ಕಾನೂನುಬಾಹಿರವಾಗಿದೆ ಮತ್ತು ಮ್ಯಾಗ್ನದ ನಡಾವಳಿ ಮತ್ತು ನೈತಿಕತೆ ನೀತಿಯ ವಿರುದ್ಧವಾಗಿದೆ.

ಅವಿಶ್ವಾಸ ಕಾನೂನುಗಳನ್ನು ಅಂತರಾಷ್ಟ್ರೀಯ ಮತ್ತು ರಾಷ್ಟ್ರೀಯ ಸ್ಪರ್ಧಾ ಪ್ರಾಧಿಕಾರಗಳು ಸಕ್ರಿಯವಾಗಿ ಜಾರಿಗೊಳಿಸುತ್ತವೆ. ಅವುಗಳಲ್ಲಿ ಹಲವು ತನಿಖೆ ಮತ್ತು ಕಾನೂನು ಕ್ರಮಗಳಲ್ಲು ಸಹಕಾರಿಯಾಗಿವೆ. ಅವಿಶ್ವಾಸದ ಉಲ್ಲಂಘನೆಗಳು ಈ ಕೆಳಗಿನ ಪರಿಣಾಮಗಳನ್ನು ಉಂಟು ಮಾಡಬಹುದು - (i) ಮ್ಯಾಗ್ನ ಅಥವಾ ಅದರ ಉದ್ಯೋಗಿಗಳಿಗೆ ಬಹಳ ದೊಡ್ಡ ದಂಡವನ್ನು (ii) ಮೂರನೇ ವ್ಯಕ್ತಿಗಳಿಂದ ಹಾನಿಗೆ ಮೊಕದ್ದಮೆಗಳನ್ನು, (iii) ಉದ್ಯೋಗಿಗಳ ಸೆರೆಯನ್ನು, (iv) ವಾಣಿಜ್ಯ ಒಪ್ಪಂದಗಳ ರದ್ದುಗೊಳಿಸುವಿಕೆಯನ್ನು ಮತ್ತು (v) ಗೌರವದ ಹಾನಿಯನ್ನು.

ಅವಿಶ್ವಾಸದ ಅನುಸರಣೆಯು ಹೆಚ್ಚು ಸಂಕೀರ್ಣ ವಿಷಯವಾಗಿದೆ. ನಿಯಮಗಳು ನ್ಯಾಯವ್ಯಾಪ್ತಿಯಿಂದ ನ್ಯಾಯವ್ಯಾಪ್ತಿಗೆ ಬದಲಾಗುತ್ತವೆ.  ಅವಿಶ್ವಾಸದ ಕಾನೂನುಗಳ ಅನುಸರಣೆಯ ಬಗ್ಗೆ ನಿಮಗೆ ಖಚಿತವಿಲ್ಲದ ಸಂದರ್ಭಗಳಲ್ಲಿ, ಕ್ರಮ ತೆಗೆದುಕೊಳ್ಳುವ ಮುಂಚೆ ನೀವು ನಿಮ್ಮ ಗುಂಪು ಅಥವಾ ಪ್ರಾದೇಶಿಕ ಕಾನೂನು ಸಲಹೆಗಾರ ಅಥವಾ ಪ್ರಾದೇಶಿಕ ಅನುಸರಣೆ ಅಧಿಕಾರಿಯನ್ನು ಸಂಪರ್ಕಿಸಬೇಕು.

### ಕಾನೂನುಬಾಹಿರ ಒಪ್ಪಂದಗಳು

ಸ್ಪರ್ಧೆಯನ್ನು ಕಡಿಮೆ ಮಾಡುವ ಪ್ರತಿಸ್ಪರ್ಧಿಗಳ ನಡುವಿನ ಒಪ್ಪಂದಗಳು ಅವಿಶ್ವಾಸ ಕಾನೂನಿನ ಅಡಿ ಅನುಮಾನಕ್ಕೆ ಎಡೆ ಇಲ್ಲದೆ ಕಾನೂನುಬಾಹಿರವಾಗಿರುತ್ತವೆ ಮತ್ತು ಆ ರೀತಿಯ ಒಪ್ಪಂದಗಳನ್ನು ಮಾಡಿಕೊಳ್ಳಬಾರದು. ಇದು ಕೆಳಗಿನ ಒಪ್ಪಂದಗಳನ್ನು ಒಳಗೊಂಡಿರುತ್ತದೆ:

- ಮಾರಾಟದ ಬೆಲೆಗಳನ್ನು ನಿಗದಿಪಡಿಸುವುದನ್ನು, ಹೆಚ್ಚಿಸುವುದನ್ನು, ಕಡಿಮೆ ಮಾಡುವುದನ್ನು ಅಥವಾ ಸ್ಥಿರಗೊಳಿಸಿವುದನ್ನು, ಅಥವಾ ಇತರ ಸ್ಪರ್ಧಾತ್ಮಕ ನಿಯಮಗಳನ್ನು ನಿಗದಿಪಡಿಸುವುದನ್ನು (ಬೆಲೆ ಸೂತ್ರ, ರಿಯಾಯಿತಿ,

ವಾಪಾಸ್ಸಾತಿ ಅಥವಾ ರಿಯಾಯಿತಿ, ಲಾಭ, ಕಮೀಷನ್ ಮತ್ತು ಕ್ರೆಡಿಟ್ ನಿಯಮಗಳು ಒಳಗೊಂಡಂತೆ);

- ಉದ್ಯೋಗಿ ವೇತನ ಅಥವಾ ಪರಿಹಾರದ ನಿಯಮಗಳನ್ನು ನಿಗದಿಪಡಿಸುವುದನ್ನು ಅಥವಾ ಪರಸ್ಪರರ ಉದ್ಯೋಗಿಗಳನ್ನು ನೇಮಿಸಿಕೊಳ್ಳುವುದನ್ನು ತಡೆಯುವುದನ್ನು;
- ಉತ್ಪಾದನೆಯನ್ನು ಮಿತಿಗೊಳಿಸುವುದನ್ನು ಅಥವಾ ಸಾಮರ್ಥ್ಯವನ್ನು ಕಡಿಮೆ ಮಾಡುವುದನ್ನು;
- ಗ್ರಾಹಕ ಅಥವಾ ಪ್ರದೇಶಕ್ಕೆ ಅನುಗುಣವಾಗಿ ಮಾರುಕಟ್ಟೆಗಳನ್ನು ಹಂಚಿಕೆ ಅಥವಾ ನಿಗದಿ ಮಾಡಿಕೊಳ್ಳುವುದನ್ನು;
- ಬಿಡ್ಡಿಂಗ್ ಚಟುವಟಿಕೆಗಳನ್ನು ಅಥವಾ "ಬಿಡ್-ರಿಗ್ಗಿಂಗ್" (ಕೆಳ ಹಂತದ ಪೂರೈಕೆದಾರ ಅಥವಾ ಟೂಲ್ ಶಾಪ್‌ಗಳೊಂದಿಗೆ ಒಪ್ಪಂದಗಳನ್ನು ಮಾಡಿಕೊಳ್ಳುವುದು ಸೇರಿದಂತೆ ಸಮನ್ವಯಗೊಳಿಸುವುದನ್ನು); ಅಥವಾ
- ಯಾವುದೇ ಗ್ರಾಹಕ ಅಥವಾ ಪೂರೈಕೆದಾರರನ್ನು ಬಹಿಷ್ಕರಿಸುವುದನ್ನು.

## ಉಲ್ಲಂಘನೆಗಳು

ಮ್ಯಾಗ್ನ ಅವಿಶ್ವಾಸ ಕಾನೂನುಗಳ ಉಲ್ಲಂಘನೆಯನ್ನು ಸಹಿಸುವುದಿಲ್ಲ. ಯಾವುದೇ ಉಲ್ಲಂಘನೆಯನ್ನು ಗಂಭೀರ ವಿಷಯವೆಂದು ಪರಿಗಣಿಸಲಾಗುವುದು ಮತ್ತು ಉದ್ಯೋಗದಿಂದ ವಜಾ ಮಾಡುವುದನ್ನು ಸೇರಿದಂತೆ ಶಿಸ್ತು ಕ್ರಮವನ್ನು ಜರುಗಿಸಬಹುದಾಗಿದೆ.

ಯಾರಾದರೂ ಮ್ಯಾಗ್ನದ ನಡಾವಳಿ ಮತ್ತು ನೈತಿಕತೆ ನೀತಿ ಅಥವಾ ಈ ನೀತಿಯನ್ನು ಉಲ್ಲಂಘಿಸುತ್ತಿರುವುದು ನಿಮಗೆ ತಿಳಿದಿದ್ದರೆ ಅಥವಾ ಆ ಬಗ್ಗೆ ಅನುಮಾನಿಸಿದರೆ, ನಿಮ್ಮ ಕಳಕಳಿಯನ್ನು ಈ ಕೆಳಗಿನವರಿಗೆ ಮಾಹಿತಿಕೊಡುವ ಮೂಲಕ ತಿಳಿಸಬೇಕು (i) ನಿಮ್ಮ ಮ್ಯಾನೇಜರ್, (ii) ವಿಭಾಗ ಅಥವಾ ಗುಂಪು ಹಣಕಾಸು ಅಧಿಕಾರಿ, (iii) ಗುಂಪು ಅಥವಾ ಪ್ರಾದೇಶಿಕ ಕಾನೂನು ಸಲಹೆಗಾರ, (iv) ಪ್ರಾದೇಶಿಕ ಅನುಸರಣೆ ಅಧಿಕಾರಿ, (v) ನೈತಿಕತೆ ಉಪಾಧ್ಯಕ್ಷ & ಮುಖ್ಯ ಅನುಸರಣೆ ಅಧಿಕಾರಿ, ಅಥವಾ (vi) ಮ್ಯಾಗ್ನ ಹಾಟ್‌ಲೈನ್ ಮೂಲಕ ತಿಳಿಸಬೇಕು.

ಮ್ಯಾಗ್ನದ ಪ್ರತೀಕಾರ-ವಿರೋಧಿ ನೀತಿಯ ಅನುಸಾರವಾಗಿ, ಮ್ಯಾಗ್ನದ ನಡಾವಳಿ ಮತ್ತು ನೈತಿಕತೆ ನೀತಿ ಅಥವಾ ಈ ನೀತಿಯ ಯಾವುದೇ ಉಲ್ಲಂಘನೆಯನ್ನು ಒಳ್ಳೆಯ ಉದ್ದೇಶದಿಂದ ವರದಿ ಮಾಡುವ ಯಾವುದೇ ವ್ಯಕ್ತಿಯ ವಿರುದ್ಧದ ಪ್ರತೀಕಾರವನ್ನು ಮ್ಯಾಗ್ನ ನಿಷೇಧಿಸುತ್ತದೆ.

## ಉಪಯುಕ್ತ ಸಲಹೆಗಳು

### *ಯಾವಾಗಲು*

- ಪ್ರತಿಸ್ಪರ್ಧಿಯೊಂದಿಗೆ ಮಾತುಕತೆ ನಡೆಸುವಾಗ ಆಗಬಹುದಾದ ವಿರೋಧದ ಪರಿಣಾಮಗಳನ್ನು ಪರಿಗಣಿಸಿ. ನಿಮ್ಮ ಮಾತುಕತೆಗಳು ಕಾನೂನಿಗೆ ಬದ್ಧವಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ನೀವು ಯಾವಾಗಲೂ ಗುಂಪು ಅಥವಾ ಪ್ರಾದೇಶಿಕ ಕಾನೂನು ಸಲಹೆಗಾರ ಅಥವಾ ಪ್ರಾದೇಶಿಕ ಅನುಸರಣೆ ಅಧಿಕಾರಿಯವರನ್ನು ಸಂಪರ್ಕಿಸಿ.
- ಅವಿಶ್ವಾಸದ ಉಲ್ಲಂಘನೆಗಳಿಗೆ ವ್ಯಕ್ತಿಗಳನ್ನು ಅಪರಾಧದ ಹೊಣೆಗಾರರನ್ನಾಗಿ ಮಾಡಬಹುದು ಎಂದು ನೆನಪಿನಲ್ಲಿಡಿ (ಜೊತೆಗೆ, ದಂಡ ಅಥವಾ ಜೈಲು ಶಿಕ್ಷೆ ವಿಧಿಸಬಹುದು).
- ಪ್ರತಿಸ್ಪರ್ಧಿಯೊಂದಿಗೆ ಹಣಕಾಸಿಗೆ ಸಂಬಂಧಪಟ್ಟ ಸೂಕ್ಷ್ಮ ಮಾಹಿತಿಯನ್ನು ಹಂಚಿಕೊಳ್ಳುವುದು ಸೇರಿದಂತೆ ವ್ಯಾಪಕ ಶ್ರೇಣಿಯ ನಡವಳಿಕೆಯು ಕಾನೂನುಬಾಹಿರ "ಒಪ್ಪಂದ" ಎಂದು ಎನ್ನಿಸಿಕೊಳ್ಳಬಹುದು ಎಂಬುದನ್ನು ನೆನಪಿನಲ್ಲಿಡಿ. ಕಾನೂನುಬಾಹಿರವಾಗಲು, "ಒಪ್ಪಂದ"ವನ್ನು ಔಪಚಾರಿಕಗೊಳಿಸಬೇಕಾದ ಅಥವಾ ಬರೆಯುವ ಅಗತ್ಯವಿರುವುದಿಲ್ಲ.
- ಕಾನೂನುಬದ್ಧ ವಾಣಿಜ್ಯ ಉದ್ದೇಶವಿದ್ದರೆ ಮಾತ್ರ ಪ್ರತಿಸ್ಪರ್ಧಿಗಳೊಂದಿಗೆ ವ್ಯವಹಾರದ ಬಗ್ಗೆ ಚರ್ಚೆ ಮಾಡಿ.
- ಯಾವುದೇ ಉತ್ಪನ್ನದ ಬೆಲೆ ನಿಗದಿ, ಮಾರ್ಕೆಟಿಂಗ್ ಅಥವಾ ಮಾರಾಟದ ಬಗ್ಗೆ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಮ್ಯಾಗ್ನದ ಸ್ವಾತಂತ್ರ್ಯವನ್ನು ಕಾಪಾಡಿ.
- ಪ್ರತಿಸ್ಪರ್ಧಿಗಳೊಂದಿಗೆ ಅಸಮರ್ಪಕ ಸಮನ್ವಯ ಅಥವಾ ಒಪ್ಪಂದವನ್ನು ಸೂಚಿಸುವ ಯಾವುದೇ ಪ್ರಕ್ರಿಯೆಯನ್ನು ತಪ್ಪಿಸಿ.
- ಮಾರುಕಟ್ಟೆಯ ತಿಳಿವನ್ನು ಕಾನೂನುಬದ್ಧವಾಗಿ, ನೈತಿಕವಾಗಿ ಮತ್ತು ಗೌರವಾನ್ವಿತ ರೀತಿಯಲ್ಲಿ ಪಡೆದುಕೊಳ್ಳಿ. ಅಜಾಗರೂಕತೆಯಿಂದ ಹಂಚಿಕೊಳ್ಳಲಾದ ಪ್ರತಿಸ್ಪರ್ಧಿಗಳ ಕುರಿತಾದ ಹಣಕಾಸಿಗೆ ಸಂಬಂಧಪಟ್ಟ ಸೂಕ್ಷ್ಮ ಮಾಹಿತಿ ನಿಮಗೆ ತಿಳಿದರೆ (ಮುಂಚಿನ ಉದ್ಯೋಗದಾತರ ಕುರಿತಾದ ಗೌಪ್ಯವಾದ ಅಥವಾ ಸಂಬಂಧಿಸಿದ ಮಾಹಿತಿ ಇನ್ನೊಬ್ಬ ಉದ್ಯೋಗಿ ಹೊಂದಿರುವುದನ್ನು ಒಳಗೊಂಡಂತೆ), ಅದನ್ನು ಬಳಸುವ ಅಥವಾ ಅದರ ಬಗ್ಗೆ ಕ್ರಮ ಕೈಗೊಳ್ಳುವ ಮೊದಲು ನಿಮ್ಮ ಗುಂಪು ಅಥವಾ ಪ್ರಾದೇಶಿಕ ಕಾನೂನು ಸಲಹೆಗಾರ ಅಥವಾ ಪ್ರಾದೇಶಿಕ ಅನುಸರಣೆ ಅಧಿಕಾರಿಯವರ ಮಾರ್ಗದರ್ಶನ ಪಡೆಯಿರಿ.

- ವಾಣಿಜ್ಯ ಮಾತುಕತೆಗಳ ಸಮಯದಲ್ಲಿ, ಪ್ರತಿಸ್ಪರ್ಧಿಗಳು ಅಥವಾ ಇತರ ಮೂರನೇ ವ್ಯಕ್ತಿಗಳೊಂದಿಗೆ ಚರ್ಚಿಸುವ ಅಥವಾ ಅವರ ಮುಂದೆ ಬಹಿರಂಗಪಡಿಸುವ ಯಾವುದೇ ಮಾಹಿತಿಯನ್ನು ವಹಿವಾಟನ್ನು ಪೂರ್ಣಗೊಳಿಸಲು ಅಥವಾ ನಿರ್ಣಯಿಸಲು ಅವಶ್ಯಕವಾಗಿರುವ ಮಾಹಿತಿಗೆ ಕಟ್ಟುನಿಟ್ಟಾಗಿ ಸೀಮಿತವಾಗಿಸಿ.
- ಪರಸ್ಪರ ಸಂಬಂಧಪಟ್ಟಿರುವ ವಿಷಯಗಳನ್ನು ಚರ್ಚಿಸಲು ಪ್ರತಿಸ್ಪರ್ಧಿಗಳು ಒಗ್ಗೂಡುವ ಕಾರಣದಿಂದ ಉದ್ಯಮ ಸಂಘಗಳಲ್ಲಿನ ಸದಸ್ಯತ್ವ ಮತ್ತು ಉದ್ಯಮ ಸಮ್ಮೇಳನಗಳಲ್ಲಿನ ಹಾಜರಾತಿ ಅವಿಶ್ವಾಸದ ಅಪಾಯಗಳನ್ನು ತಂದೊಡ್ಡುತ್ತವೆ ಎಂದು ತಿಳಿದಿರಲಿ. ಅವಿಶ್ವಾಸದ ಕಾನೂನುಗಳನ್ನು ಉಲ್ಲಂಘಿಸಬಹುದಾದ ಅಸಮರ್ಪಕ ಮಾತುಕತೆ ಅಥವಾ ಸಮನ್ವಯತೆಯನ್ನು ತಪ್ಪಿಸಲು ಸಭೆಗಳು ಮತ್ತು ಕಾರ್ಯಕ್ರಮಗಳಿಗೆ ಹಾಜರಾಗುವಾಗ ನೀವು ಹೆಚ್ಚಿನ ಕಾಳಜಿ ತೆಗೆದುಕೊಳ್ಳಬೇಕು. ಉದ್ಯಮ ಸಂಘಗಳಲ್ಲಿ ಭಾಗವಹಿಸುವ ಮುನ್ನ, ನಿಮ್ಮ ಭಾಗವಹಿಸುವಿಕೆ ಅವಿಶ್ವಾಸದ ಕಾನೂನುಗಳ ಅಡಿ ಕಳವಳವನ್ನು ಉಂಟುಮಾಡಬಹುದೇ ಎನ್ನುವ ಖಚಿತತೆ ಇಲ್ಲದಿದ್ದರೆ ಗುಂಪು ಅಥವಾ ಪ್ರಾದೇಶಿಕ ಕಾನೂನು ಸಲಹೆಗಾರ ಅಥವಾ ಪ್ರಾದೇಶಿಕ ಅನುಸರಣೆ ಅಧಿಕಾರಿಯವರನ್ನು ಸಂಪರ್ಕ ಮಾಡಿ.
- ಪ್ರತಿಸ್ಪರ್ಧಿಯ ಜಾಗಕ್ಕೆ ಭೇಟಿ ನೀಡುವುದು ಅಥವಾ ಮ್ಯಾಗ್ನಗೆ ಭೇಟಿ ನೀಡಲು ಪ್ರತಿಸ್ಪರ್ಧಿಯನ್ನು ಆಹ್ವಾನಿಸುವುದು ಅವಿಶ್ವಾಸದ ಉಲ್ಲಂಘನೆಗಳಿಗೆ ಕಾರಣವಾಗಬಹುದು ಎಂಬುದನ್ನು ತಿಳಿದಿರಿ. ನೀವು ಒಳಗೊಂಡಿರುವವರು ಈ ಅಪಾಯಗಳ ಬಗ್ಗೆ ಮಾಹಿತಿ ಹೊಂದಿದ್ದಾರೆ ಮತ್ತು ಇಂತಹ ಉಲ್ಲಂಘನೆಗಳನ್ನು ತಡೆಗಟ್ಟಲು ಸೂಕ್ತವಾದ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಲಾಗಿದೆ ಎಂಬುದರ ಕುರಿತು ಕಾಳಜಿ ವಹಿಸಬೇಕು. ಅಗತ್ಯ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳುವಲ್ಲಿ ನಿಮ್ಮ ಗುಂಪು ಮತ್ತು ಪ್ರಾದೇಶಿಕ ಕಾನೂನು ಸಲಹೆಗಾರ ಅಥವಾ ಪ್ರಾದೇಶಿಕ ಅನುಸರಣೆ ಅಧಿಕಾರಿ ನಿಮಗೆ ನೆರವು ನೀಡಬಹುದು.
- ಅವಿಶ್ವಾಸದ ಉಲ್ಲಂಘನೆಗಳು ಆದಲ್ಲಿ, ಅಥವಾ ಪ್ರತಿಸ್ಪರ್ಧಿ ಸ್ಪರ್ಧಾತ್ಮಕ ಸೂಕ್ಷ್ಮ ಮಾಹಿತಿಯನ್ನು ಹಂಚಿಕೊಂಡರೆ ಅಥವಾ ನೀಡಿದರೆ ತಕ್ಷಣವೇ ಮ್ಯಾನೇಜ್ಮೆಂಟ್ ಮತ್ತು/ಅಥವಾ ನಿಮ್ಮ ಗುಂಪು ಅಥವಾ ಪ್ರಾದೇಶಿಕ ಕಾನೂನು ಸಲಹೆಗಾರರಿಗೆ ಅಥವಾ ಪ್ರಾದೇಶಿಕ ಅನುಸರಣೆ ಅಧಿಕಾರಿಯವರಿಗೆ ತಿಳಿಸಿ. ಇಂತಹ ಸಂದರ್ಭಗಳಲ್ಲಿ ಕ್ರಮ ತೆಗೆದುಕೊಳ್ಳಲು ನೀವು ಯಾವುದೇ ರೀತಿಯಲ್ಲಿ ವಿಫಲರಾದರೆ, ಆಗ ಅನುಚಿತ ನಡಾವಳಿಯಲ್ಲಿ ಭಾಗಿಯಾಗಿರುವುದಾಗಿ ಪರಿಗಣಿಸಬಹುದು. ಒಪ್ಪಂದದ ಕುರಿತಾದ ಸಮಾಲೋಚನೆ, ಉದ್ಯಮ ಸಂಘಗಳಲ್ಲಿನ ಸಭೆ ಅಥವಾ ಕಾನ್ಫರೆನ್ಸ್, ಅಥವಾ ಸಾಮಾಜಿಕ ಅಥವಾ ದತ್ತಿ ಕಾರ್ಯಕ್ರಮ ಸೇರಿದಂತೆ ಪ್ರತಿಸ್ಪರ್ಧಿಯೊಂದಿಗೆ ಮಾತುಕತೆ ಸಂಭವಿಸಬಹುದಾದ ಯಾವುದೇ ಪರಿಸ್ಥಿತಿಗೆ ಇದು ಅನ್ವಯ ಆಗುತ್ತದೆ. ಹಣಕಾಸಿಗೆ ಸಂಬಂಧಪಟ್ಟಂತೆ ನೀವು ಸೂಕ್ಷ್ಮ ಎಂದು ಪರಿಗಣಿಸಬಹುದಾದ ವಿಷಯವನ್ನು ಪ್ರತಿಸ್ಪರ್ಧಿ ಚರ್ಚಿಸಿದರೆ, ನೀವು ಈ ಕೆಳಗಿನಂತೆ ಮಾಡಬೇಕು:
  - ತಕ್ಷಣವೇ ವಿಷಯ ಚರ್ಚಿಸುವುದನ್ನು ನಿಲ್ಲಿಸಿ;
  - ಪ್ರತಿಸ್ಪರ್ಧಿ ಮುಂದುವರೆಸಿದರೆ, ಮಾತುಕತೆಯನ್ನು ಮುಕ್ತಾಯಗೊಳಿಸಿ ಮತ್ತು ಮ್ಯಾಗ್ನ ಫೈಲ್‌ನಲ್ಲಿ ಇರಿಸುವ ಸಲುವಾಗಿ ಏನಾಯಿತು ಎಂಬುದರ ಕುರಿತು ತ್ವರಿತವಾಗಿ ವಿವರಗಳೊಂದಿಗೆ ಟಿಪ್ಪಣಿಗಳನ್ನು ಸಿದ್ಧಪಡಿಸಿ;
  - ಔಪಚಾರಿಕ ಸಭೆಯ ಸಮಯದಲ್ಲಿ ಕಾರ್ಯಕ್ರಮ ಆದಲ್ಲಿ, ಉದಾಹರಣೆಗೆ, ಟ್ರೇಡ್ ಅಸೋಸಿಯೇಷನ್ ಸಭೆಯ ಸಮಯದಲ್ಲಿ ಆದಲ್ಲಿ, ಸಭೆಯಿಂದ ತಕ್ಷಣವೇ ಹೊರನಡೆಯಿರಿ ಮತ್ತು ನೀವು ಹೊರಬಂದಿರುವುದು ಸಭೆಯ ಮಿನಿಟ್‌ಗಳಲ್ಲಿ ಸೇರಿಸುವಂತೆ ವಿನಂತಿಸಿ; ಮತ್ತು
  - ಪ್ರತಿ ಸಂದರ್ಭದಲ್ಲೂ, ತಕ್ಷಣವೇ ನಿಮ್ಮ ಗುಂಪು ಅಥವಾ ಪ್ರಾದೇಶಿಕ ಕಾನೂನು ಸಲಹೆಗಾರರಿಗೆ ಅಥವಾ ಪ್ರಾದೇಶಿಕ ಅನುಸರಣೆ ಅಧಿಕಾರಿಗೆ ಘಟನೆ ವರದಿ ಮಾಡಿ.
- ಮ್ಯಾಗ್ನ ಅವಿಶ್ವಾಸ ಉಲ್ಲಂಘನೆಗಳಿಗೆ ಬಲಿಯಾಗಬಹುದು ಎಂಬುದನ್ನು ನೆನಪಿನಲ್ಲಿಡಿ. ಉದಾಹರಣೆಗೆ, ಅವಿಶ್ವಾಸ ಉಲ್ಲಂಘನೆಗಳಲ್ಲಿ ತೊಡಗಿರುವ ಪೂರೈಕೆದಾರರಿಂದ ಸರಕುಗಳನ್ನು ಖರೀದಿ ಮಾಡುವವರಾಗಿ. ಮ್ಯಾಗ್ನ ಸ್ಪರ್ಧಾತ್ಮಕ-ವಿರೋಧಿ ಚಟುವಟಿಕೆಗಳ ಬಲಿಪಶು ಆಗುತ್ತಿದೆ ಎಂದು ನಿಮಗೆ ಅನುಮಾನವಿದ್ದರೆ ನಿಮ್ಮ ಗುಂಪು ಅಥವಾ ಪ್ರಾದೇಶಿಕ ಕಾನೂನು ಸಲಹೆಗಾರ ಅಥವಾ ಪ್ರಾದೇಶಿಕ ಅನುಸರಣೆ ಅಧಿಕಾರಿಯನ್ನು ನೀವು ಸಂಪರ್ಕ ಮಾಡಬೇಕು.
- ಇ-ಮೇಲ್ ಮತ್ತು ಸಂದೇಶಗಳು ಅಥವಾ ಇತರ ದಾಖಲೆ, ಚರ್ಚೆ ಮತ್ತು ಸಾರ್ವಜನಿಕ ಹೇಳಿಕೆಗಳನ್ನು ಒಳಗೊಂಡಂತೆ ಎಲ್ಲಾ ಆಂತರಿಕ ಮತ್ತು ಬಹಿರಂಗ ಮಾತುಕತೆಗಳಲ್ಲಿ ಅಸಡ್ಡೆಯ ಅಥವಾ ತಪ್ಪಾದ ಹೇಳಿಕೆಗಳನ್ನು ತಪ್ಪಿಸಿ. ಇವುಗಳನ್ನು ಮೂರನೇ ವ್ಯಕ್ತಿಗಳು ಅಥವಾ ಅವಿಶ್ವಾಸ ಅಧಿಕಾರಿಗಳು ಮತ್ತು ನ್ಯಾಯಾಲಯಗಳು ತಪ್ಪಾಗಿ ಅರ್ಥೈಸಬಹುದಾಗಿದೆ. ಎಲ್ಲಾ ಮಾತುಕತೆಗಳನ್ನು ವೃತ್ತಿಪರವಾಗಿಯೆ ಇರಿಸಿ ಮತ್ತು ಹಾಸ್ಯದ ಅಥವಾ ಚೇಷ್ಟೆಯ ಅಥವಾ ಪ್ರಚೋದನಕಾರಿ ಮಾತಿನ ಬಳಕೆಯನ್ನು ತಪ್ಪಿಸಿ.
- ಮ್ಯಾಗ್ನ ಅಥವಾ ನಮ್ಮ ಉದ್ಯಮದಲ್ಲಿನ ಯಾವುದೇ ಇತರ ಕಂಪನಿಯಾದ ಮ್ಯಾಗ್ನ ಕಾರ್ಪೊರೇಟ್ ಕಮ್ಯುನಿಕೇಷನ್ಸ್ ಮತ್ತು ಮೀಡಿಯಾ ರಿಲೇಶನ್ಸ್ ತೊಡಗಿಸಿಕೊಂಡಿರುವ ಯಾವುದೇ ಅವಿಶ್ವಾಸದ ತನಿಖೆಗೆ ಸಂಬಂಧಿಸಿದ ಮೀಡಿಯಾದಿಂದ ಎಲ್ಲಾ ವಿಚಾರಣೆಗಳನ್ನು ನೋಡಿ.
- ನಿಮ್ಮ ಗುಂಪು ಅಥವಾ ಪ್ರಾದೇಶಿಕ ಕಾನೂನು ಸಲಹೆಗಾರ ಅಥವಾ ಪ್ರಾದೇಶಿಕ ಅನುಸರಣೆ ಅಧಿಕಾರಿಯನ್ನು ಸಂಪರ್ಕಿಸಿ ಅಥವಾ ನಿಮಗೆ ಹೆಚ್ಚು ಆರಾಮದಾಯಕವಾಗಿದ್ದರೆ, ಮ್ಯಾಗ್ನ ಹಾಟ್‌ಲೈನ್ ಬಳಸಿ:
  - ನಿಮ್ಮಿಂದ ಅಥವಾ ಯಾವುದೇ ಇತರ ಮ್ಯಾಗ್ನ ಉದ್ಯೋಗಿಯಿಂದ ಅಥವಾ ಮೂರನೇ ವ್ಯಕ್ತಿಯಿಂದಾದ ಯಾವುದೇ ಉಲ್ಲಂಘನೆಗಳು ಅಥವಾ ಅವಿಶ್ವಾಸ ಕಾನೂನುಗಳ ಸಂಭಾವ್ಯ ಉಲ್ಲಂಘನೆಗಳ ಬಗ್ಗೆ ನಿಮಗೆ ತಿಳಿದಿದ್ದರೆ;
  - ಮ್ಯಾಗ್ನದ ನಡಾವಳಿ ಅಥವಾ ಪ್ರಸ್ತಾವಿತ ನಡಾವಳಿಯ ಮಾರ್ಗದಿಂದ, ಅವಿಶ್ವಾಸದ ಕಾನೂನುಗಳ

ಉಲ್ಲಂಘನೆಯಾಗಿದೆ ಅಥವಾ ಆಗಿರಬಹುದು ಎಂದು ಮೂರನೇ ವ್ಯಕ್ತಿಯಿಂದ (ಸಾಕ್ಷ್ಯಾಧಾರಗಳೊಂದಿಗೆ ಅಥವಾ ಅವುಗಳಿಲ್ಲದೆ) ದೂರು ಸ್ವೀಕೃತವಾದರೆ;

- ಯಾವುದೇ ಹಣಕಾಸಿಗೆ ಸಂಬಂಧಿಸಿದ ಸೂಕ್ಷ್ಮ ಮಾಹಿತಿಯನ್ನು ಹಂಚಿಕೊಳ್ಳುವ ಮುನ್ನ ಅಥವಾ ಪ್ರತಿಸ್ಪರ್ಧಿಯೊಂದಿಗೆ ಯಾವುದೇ ಚರ್ಚೆ ಆರಂಭಿಸುವ ಮುನ್ನ, ಅಂತಹ ಕ್ರಿಯೆಗಳ ಸೂಕ್ತತೆ ಮತ್ತು/ಅಥವಾ ಕಾನೂನುಬದ್ಧತೆಯ ಬಗ್ಗೆ ನೀವು ಪ್ರಶ್ನೆಗಳನ್ನು ಹೊಂದಿದ್ದರೆ;
- ಸ್ಪರ್ಧೆ ಕಡಿಮೆ ಮಾಡುವಂತ ಯಾವುದೇ ಒಪ್ಪಂದವನ್ನು ಗ್ರಾಹಕ ಅಥವಾ ಪೂರೈಕೆದಾರರೊಂದಿಗೆ ಮಾಡಿಕೊಳ್ಳುವ ಮೊದಲು (ಉದಾಹರಣೆಗೆ, ವಿಶೇಷ ಒಪ್ಪಂದಗಳು, ಸ್ಪರ್ಧಾತ್ಮಕವಲ್ಲದ ಒಪ್ಪಂದಗಳು ಅಥವಾ ವ್ಯಾಪಾರವನ್ನು ನಡೆಸಬಹುದಾದ ಪ್ರದೇಶಗಳ ಮೇಲೆ ನಿರ್ಬಂಧಗಳನ್ನು ವಿಧಿಸುವ ಒಪ್ಪಂದಗಳು);
- ತಕ್ಷಣವೇ, ಮತ್ತು ಯಾವುದೇ ಕ್ರಮವನ್ನು ತೆಗೆದುಕೊಳ್ಳುವ ಮುನ್ನ, ಮೂರನೇ ವ್ಯಕ್ತಿಗೆ ಸಂಬಂಧಿಸಿದ ಅವಿಶ್ವಾಸ ತನಿಖೆಗಳನ್ನು ಒಳಗೊಂಡಂತೆ ಮ್ಯಾಗ್ನ ಅನ್ನು ಅಥವಾ ವೈಯಕ್ತಿಕವಾಗಿ ನಿಮ್ಮನ್ನು ಅವಿಶ್ವಾಸ ಪ್ರಾಧಿಕಾರದಿಂದ ಸಂಪರ್ಕ ಮಾಡಿದ್ದರೆ; ಮತ್ತು
- ಅವಿಶ್ವಾಸ ಸಮಸ್ಯೆಗಳ ಬಗ್ಗೆ ನಿಮಗೆ ಯಾವುದೇ ಅನುಮಾನ ಅಥವಾ ಪ್ರಶ್ನೆಗಳು ಇದ್ದಲ್ಲಿ, ತಕ್ಷಣವೇ ಮತ್ತು ಯಾವುದೇ ಕ್ರಮವನ್ನು ತೆಗೆದುಕೊಳ್ಳುವ ಮುನ್ನ.

## *ಎಂದಿಗೂ...*

- ನೇರವಾಗಿ ಅಥವಾ ಪರೋಕ್ಷವಾಗಿ (ಏಜೆಂಟರು, ಪೂರೈಕೆದಾರರು ಅಥವಾ ಗ್ರಾಹಕರು ಸೇರಿದಂತೆ ಮೂರನೇ ವ್ಯಕ್ತಿಗಳ ಮೂಲಕ) ಪ್ರತಿಸ್ಪರ್ಧಿಯೊಂದಿಗೆ ಸಂಪರ್ಕದ ಉದ್ದೇಶ ಅಥವಾ ಪರಿಣಾಮ ಸ್ಪರ್ಧೆಯನ್ನು ನಿರ್ಬಂಧಿಸುವುದು ಅಥವಾ ಕಡಿಮೆ ಮಾಡುವುದಾಗಿದ್ದರೆ ಸಂಪರ್ಕ ಮಾಡಬೇಡಿ.
- ಪ್ರತಿಸ್ಪರ್ಧಿ ಅಥವಾ ಇತರ ಯಾವುದೇ ಮೂರನೇ ವ್ಯಕ್ತಿಯೊಂದಿಗೆ ಒಪ್ಪಂದ ಮಾಡಿಕೊಳ್ಳುವ ಉದ್ದೇಶ ಅಥವಾ ಪರಿಣಾಮ ಸ್ಪರ್ಧೆಯನ್ನು ನಿರ್ಬಂಧಿಸುವುದು ಅಥವಾ ಕಡಿಮೆ ಮಾಡುವುದು ಆಗಿದಲ್ಲಿ, ಕೆಳಗಿನವುಗಳನ್ನು ಒಳಗೊಂಡಂತೆ ಯಾವುದೇ ಉದ್ದೇಶ ಇದಲ್ಲಿ, ಒಪ್ಪಂದ ಮಾಡಿಕೊಳ್ಳಬೇಡಿ, ಒಪ್ಪಂದ ಮಾಡಿಕೊಳ್ಳುವ ಪ್ರಯತ್ನ ಮಾಡಬೇಡಿ,:
  - ಮಾರಾಟವಾದ ಸರಕುಗಳ ಬೆಲೆಗಳನ್ನು ನಿಗದಿಪಡಿಸುವುದು, ಹೆಚ್ಚಿಸುವುದು, ಕಡಿಮೆ ಮಾಡುವುದು ಅಥವಾ ಸ್ಥಿರಗೊಳಿಸುವುದನ್ನು;
  - ಬೆಲೆ ಸೂತ್ರ, ರಿಯಾಯಿತಿ, ಲಾಭಗಳು, ಕಮೀಷನ್ ಅಥವಾ ಕ್ರೆಡಿಟ್ ನಿಯಮಗಳಂತಹ ಇತರ ಸ್ಪರ್ಧಾತ್ಮಕ ನಿಯಮಗಳನ್ನು ನಿಗದಿಪಡಿಸುವುದನ್ನು;
  - ಉತ್ಪಾದನೆ ಅಥವಾ ವಿಸ್ತರಣೆಯನ್ನು ಮಿತಿಗೊಳಿಸುವುದನ್ನು ಅಥವಾ ಉತ್ಪಾದನಾ ಸಾಮರ್ಥ್ಯವನ್ನು ಕಡಿಮೆ ಮಾಡುವುದನ್ನು ಅಥವಾ ಮಿತಿಗೊಳಿಸಲು ಒಪ್ಪಿಕೊಳ್ಳುವುದನ್ನು;
  - ಬಿಡ್ ಅನ್ನು ತಿರುಚುವುದನ್ನು ಅಥವಾ ಕಾನೂನುಬಾಹಿರವಾಗಿ ಬಿಡ್ಡಿಂಗ್ ಅಥವಾ ಟೆಂಡರ್ ಚಟುವಟಿಕೆಗಳನ್ನು ನಡೆಸುವುದನ್ನು;
  - ಉದ್ಯೋಗಿ ವೇತನ, ಪ್ರಯೋಜನ ಅಥವಾ ಪರಿಹಾರದ ಇತರ ನಿಯಮಗಳನ್ನು ನಿಗದಿಪಡಿಸುವುದನ್ನು;
  - ಪರಸ್ಪರರ ಉದ್ಯೋಗಿಗಳನ್ನು ನೇಮಿಸಿಕೊಳ್ಳುವುದನ್ನು ತಡೆಯುವುದನ್ನು;
  - ಮಾರುಕಟ್ಟೆ, ಗ್ರಾಹಕ, ಪೂರೈಕೆದಾರರು ಅಥವಾ ಭೌಗೋಳಿಕ ಪ್ರದೇಶಗಳನ್ನು ಹಂಚಿಕೆಯನ್ನು; ಅಥವಾ
  - ಯಾವುದೇ ಗ್ರಾಹಕ ಅಥವಾ ಪೂರೈಕೆದಾರರನ್ನು ಬಹಿಷ್ಕರಿಸುವುದನ್ನು.
- ಈಗಾಗಲೇ ಸಾರ್ವಜನಿಕವಾಗಿ ಲಭ್ಯವಿಲ್ಲದ ಹೊರತಾಗಿ, ಯಾವುದೇ ಪ್ರತಿಸ್ಪರ್ಧಿಯೊಂದಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಈ ಕೆಳಗಿನ ರೀತಿಯ ಸ್ಪರ್ಧಾತ್ಮಕ ಸೂಕ್ಷ್ಮ ಮಾಹಿತಿಯ ಕುರಿತು ಮಾತುಕತೆ ನಡೆಸಬೇಡಿ, ಯಾವುವೆಂದರೆ:
  - ಗ್ರಾಹಕ ಅಥವಾ ಪೂರೈಕೆದಾರರೊಂದಿಗಿನ ಹಿಂದಿನ, ಈಗಿನ ಅಥವಾ ಮುಂದಿನ ವ್ಯಾಪರ ಸಮಾಲೋಚನೆಗಳ ಬಗ್ಗೆ ಅಥವಾ ಸಾಮಾನ್ಯ ವ್ಯಾಪರ ಸಮಾಲೋಚನ ತಂತ್ರಗಳ ಬಗ್ಗೆ;
  - ಬೆಲೆ, ಬೆಲೆ ಸೂತ್ರಗಳು, ರಿಯಾಯಿತಿ, ಲಾಭಗಳು ಅಥವಾ ಕ್ರೆಡಿಟ್ ನಿಯಮಗಳು ಸೇರಿದಂತೆ ಮತ್ತು ಅಷ್ಟಕ್ಕೆ ಸೀಮಿತವಾಗದೆ ಹಿಂದಿನ, ಈಗಿನ ಅಥವಾ ಮುಂದಿನ ವ್ಯಾಪಾರದ ನಿಯಮಗಳ ಬಗ್ಗೆ;
  - ವೆಚ್ಚದ ಮಾಹಿತಿಯನ್ನು ಕುರಿತಾಗಿ;
  - ಸಾಮರ್ಥ್ಯ, ಉತ್ಪಾದನೆ, ಅಥವಾ ಮಾರಾಟ ಯೋಜನೆ ಮತ್ತು ಮುನ್ಸೂಚನೆಗಳ ಕುರಿತಾಗಿ;
  - ಮಾರ್ಕೆಟಿಂಗ್ ಯೋಜನೆಗಳು, ಅಥವಾ ಸ್ವಾಧೀನ ಅಥವಾ ಜಂಟಿ ಉದ್ಯಮ ಯೋಜನೆಗಳು ಸೇರಿದಂತೆ ಕಾರ್ಯತಂತ್ರದ ಯೋಜನೆಗಳ ಕುರಿತಾಗಿ;
  - ಹಿಂದಿನ, ಈಗಿನ ಅಥವಾ ಮುಂದಿನ ಸ್ಟಾಕ್ ಮಟ್ಟ, ಉತ್ಪಾದನೆ, ಮಾರಾಟದ ಡೇಟಾ ಅಥವಾ ಮಾರುಕಟ್ಟೆ ಪರಿಸ್ಥಿತಿಗಳ

ಕುರಿತಾಗಿ; ಅಥವಾ

  - ಸಂಶೋಧನೆ ಮತ್ತು ಅಭಿವೃದ್ಧಿ (ಆರ್&ಡಿ) ಅಥವಾ ಇತರ ಹೊಸ ಚಟುವಟಿಕೆಗಳ ಕುರಿತು.

- ಪ್ರತಿಸ್ಪರ್ಧಿಗಳು ಒಂದೇ ರೀತಿಯ ಕ್ರಮಗಳನ್ನು ಕೈಗೊಂಡರೆ ಒಪ್ಪಂದ ಮುಕ್ತಾಯಗೊಳ್ಳಬಹುದಾದ್ದರಿಂದ, ಪ್ರತಿಸ್ಪರ್ಧಿಗಳಿಗೆ ಮ್ಯಾಗ್ನದ ಭವಿಷ್ಯದ ಯೋಜನೆಗಳನ್ನು ಬಹಿರಂಗಪಡಿಸಬೇಡಿ.
- ಅವಿಶ್ವಾಸದ ತನಿಖೆಯ ಸಮಯದಲ್ಲಿ ನಿಯಂತ್ರಕ ಅಥವಾ ತನಿಖಾಧಿಕಾರಿಗಳನ್ನು ಅಡ್ಡಿಪಡಿಸಬೇಡಿ (ರೈಡ್ ನಡೆಸಲು ಅಥವಾ ಸರ್ಚ್ ವಾರಂಟ್ ಅನ್ನು ಜಾರಿ ಮಾಡಲು ದಿಢೀರಾಗಿ ಮ್ಯಾಗ್ನ ಜಾಗದಲ್ಲಿ ಅಧಿಕಾರಿಗಳು ಬಂದ ಸಂದರ್ಭವೂ ಸೇರಿಸಿದಂತೆ). ಅಧಿಕಾರಿಗಳಿಗೆ ಸುಳ್ಳು ಅಥವಾ ತಪ್ಪುದಾರಿಗೆಳೆಯುವ ಮಾಹಿತಿಯನ್ನು ಒದಗಿಸಬೇಡಿ ಅಥವಾ ಯಾವುದೇ ತನಿಖೆಗೆ ಸಂಬಂಧಿಸಿದ ದಾಖಲೆಗಳನ್ನು ಮರೆಮಾಡಬೇಡಿ ಅಥವಾ ನಾಶಪಡಿಸಬೇಡಿ.

## ಹೆಚ್ಚಿನ ಮಾಹಿತಿಗಾಗಿ:

ಹೆಚ್ಚಿನ ಮಾಹಿತಿಗಾಗಿ ಅಥವಾ ಸಲಹೆಗಾಗಿ, ದಯವಿಟ್ಟು ನಿಮ್ಮ ಗುಂಪು ಅಥವಾ ಪ್ರಾದೇಶಿಕ ಕಾನೂನು ಸಲಹೆಗಾರ, ಪ್ರಾದೇಶಿಕ ಅನುಸರಣೆ ಅಧಿಕಾರಿ ಅಥವಾ Magnaದ ನೈತಿಕತೆ ಉಪಾಧ್ಯಕ್ಷರು ಮತ್ತು ಮುಖ್ಯ ಅನುಸರಣೆ ಅಧಿಕಾರಿಗಳನ್ನು ಸಂಪರ್ಕಿಸಿ.

---

| | |
|---|---|
| Issued: | June 1, 2014 |
| Revised: | June 16, 2021 |
| Next Review: | Q2 2024 |
| Issued By: | Ethics & Legal Compliance |
| Approved By: | Magna Compliance Council |